


### ಹೂವು ತಂದ ಸಂತಸ

ಶರದೃತುವಿನ ಸಂದರ್ಭದಲ್ಲಿ ಅ.8ರ 'ಸುಧಾ' ಸಂಚಿಕೆಯ ಮುಖಪುಟ ನೋಡಿ ಬಹಳ ಸಂತಸವಾಯಿತು. 'ಹೂವು ಅರಳುವ ಸಮಯ'ದ ಶೀರ್ಷಿಕೆ ಹೊತ್ತು ಬಂದ ಸುಂದರ ಹೂವುಗಳ ಚಿತ್ರದ ಸುಧಾವನ್ನು ಸ್ಪರ್ಶಿಸುವುದೇ ಆನಂದ ಭಾವನೆ ತಂದಿತು. ಕರ್ನಾಟಕದ ರೈತರು ನೂರು ಕೋಟಿ ರೂಪಾಯಿಗಳ ಹೂವನ್ನು ರಫ್ತು ಮಾಡುತ್ತಾರೆ ಎಂದರೆ– ರೈತರ ಈ ಸಾಧನೆ ಬಗೆಗೆ ಹೆಮ್ಮೆ ಅನಿಸಿತು.

–ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ದೇಶವಳ್ಳಿ ಶಿವು, ಸಂತೇಮರಹಳ್ಳಿ/ ದೇಬೂರು ಮಂಜುನಾಥ

### ಗಾಂಧಿ: ಕಲ್ಪನೆಯಲ್ಲ

ಗಾಂಧೀಜಿಯವರ ಆಹಾರ ಕಾಯಕ ನಿಜಕ್ಕೂ ಕಲ್ಪನೆಯಲ್ಲ. ಅದು ವಾಸ್ತವಕ್ಕಿಂತ ಮಿಗಿಲಾದದ್ದು. ಅದು ಜಾರಿಯಾದರೆ ದೇಶ ಸುಭಿಕ್ಷವಾಗುವುದರಲ್ಲಿ ಸಂದೇಹವಿಲ್ಲ. ಎಂ.ಜಿ.ಬಸವರಾಜ ಮಾಹಿತಿಯನ್ನು ಅಚ್ಚುಕಟ್ಟಾಗಿ ತಿಳಿಸಿಕೊಟ್ಟಿದ್ದಾರೆ.

–ಅನ್ನಪೂರ್ಣ ಮಧುಸೂದನ, ಮೈಸೂರು/ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಕಾಲು ಮುರಿದ ಗತ್ತು!

'ಗತ್ತಿನ ನಡಿಗೆಗೆ ಗ್ಲೇಡಿಯೇಟರ್' ಓದಿದಾಗ ಗತ್ತಿನ ನಡಿಗೆಗಾಗಿ ಗೂಟದ ಹಿಮ್ಮಡಿಯ ಚಪ್ಪಲಿ ಧರಿಸಿ ಕಾಲುಳುಕಿಸಿಕೊಂಡು ಬಿದ್ದು ಕಾಲು ಮುರಿದುಕೊಂಡದ್ದು ನೆನಪಿಗೆ ಬಂತು. ಫ್ಯಾಷನ್ ಅಲ್ಲವಾದರೂ ಆರಾಮದಾಯಕವಾದ ವಸ್ತುಗಳನ್ನು ಬಳಸುವುದೇ ಕ್ಷೇಮ ಎಂಬುದು ಅನುಭವದ ಅನಿಸಿಕೆ.

–ಎ.ಎಸ್.ರೇಷ್ಮಾ, ಬಾಳೆಹೊನ್ನೂರು

### ಕಥೆ ಇಷ್ಟವಾಯ್ತು

ಎಚ್.ಕೆ. ಅನಸೂಯ ಸಂಪತ್‌ರು ಬರೆದ ಕಥೆ 'ಸಾಂಗತ್ಯ' ತುಂಬಾ ಇಷ್ಟವಾಯಿತು. ವಿಜಯಾರ ಬಗ್ಗೆ ಲೇಖಕಿಯ ಗೌರವ ಭಾವನೆ ಕಂಡು (ಬಹುವಚನ ಬಳಸಿದ್ದು) ಹೆಮ್ಮೆ ಎನಿಸಿತು. ಒಳ್ಳೆಯ ಕಥೆಗಳನ್ನು ನೀಡುತ್ತಾ ಬಂದಿರುವ ಸುಧಾಗೆ ವಂದನೆಗಳು.

–ವಿಜಯಲಕ್ಷ್ಮಿ ರಮೇಶ್, ಬೆಂಗಳೂರು

### ಕುತೂಹಲಕಾರಿ ಧಾರಾವಾಹಿ

ಡಾ.ಕೆ.ಎನ್.ಗಣೇಶಯ್ಯ ಅವರ 'ಚಿತಾದಂತ' ಧಾರಾವಾಹಿ ತನ್ನ ವಿಭಿನ್ನ, ವಿಶಿಷ್ಟ ನಿರೂಪಣೆಯಿಂದ ವಾರದಿಂದ ವಾರಕ್ಕೆ ಕುತೂಹಲ ಕೆರಳಿಸುತ್ತಾ ಓದಿಸಿಕೊಂಡು ಹೋಗುತ್ತದೆ.

–ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ

### ಇನ್ನೂ ಏನಿದೆ ನೋಡೋಣ...

'ಚಿತಾದಂತ' ಕುತೂಹಲವನ್ನು ಕೆರಳಿಸುತ್ತಾ ಸಾಗಿದೆ ಎನ್ನುವುದರಲ್ಲಿ ಅತಿಶಯೋಕ್ತಿ ಏನಿಲ್ಲ.

ಅಲೆಗ್ಸಾಂಡರ್ ಭಾರತದಲ್ಲಿ ತನ್ನ ಚಕ್ರಾಧಿಪತ್ಯವನ್ನು ಸ್ಥಾಪಿಸುವಲ್ಲಿ ವಿಫಲನಾಗಲು ಕಾರಣ– ಆತನ ಸೈನ್ಯಪಡೆ ನಿರಂತರವಾಗಿ ಹತ್ತು ವರ್ಷಗಳ ಕಾಲ ನಡೆಸಿದ ದಂಡಯಾತ್ರೆ, ಅವಶ್ಯಕ ಸಾಮಗ್ರಿಗಳ ಕೊರತೆ, ತಾಯ್ನಾಡಿಗೆ




ಮರಳಬೇಕೆಂಬ ಹಂಬಲ, ಪ್ರತಿಕೂಲ ಹವಾಮಾನ ಇತ್ಯಾದಿ– ಎಂದು ಚರಿತ್ರೆಯ ಪುಟಗಳಲ್ಲಿ ಓದಿ, ಪಾಠ ಮಾಡಿದ ನನಗೆ ಡಾಕ್ಟರ್ ಗಣೇಶಯ್ಯನವರ ವ್ಯಾಖ್ಯಾನದಲ್ಲಿಯೂ ತಥ್ಯವಿದೆ ಎನಿಸಿತು.

ಧಾರಾವಾಹಿಯ ಮುಂಬರುವ ಪುಟಗಳಲ್ಲಿ ಇನ್ನೂ ಏನಿದೆ ನೋಡೋಣ ಎನ್ನುವ ಕುತೂಹಲವನ್ನು ಹೆಚ್ಚಿಸಿದೆ.

–ಜೀವಂಧರಕುಮಾರ ಕೆ. ಹೋತಪೇಟಿ, ಮೈಸೂರು

### ಮಹಿಳೆಯರಿಗೆ ಕಥಾಸ್ಪರ್ಧೆ

ಮುಂಬೈನ ಜಗಜ್ಯೋತಿ ಕಲಾವೃಂದವು ಪ್ರತಿವರ್ಷದಂತೆ ಮಹಿಳೆಯರ ಕಥೆ ಹಾಗೂ ಕವಿತಾ ಸಂಕಲನಗಳ ಸ್ಪರ್ಧೆಯನ್ನು ಏರ್ಪಡಿಸಿದೆ.

ಕವಿತಾ ಸಂಕಲನಕ್ಕೆ ಕಳಿಸುವವರು ಕನಿಷ್ಠ 30 ಕವಿತೆಗಳನ್ನು ಕಳಿಸಬಹುದು. ಖಂಡಕಾವ್ಯ ಅಥವಾ ಮಿನಿ ಕವಿತೆಗಳನ್ನು ಪರಿಗಣಿಸುವುದಿಲ್ಲ. 100ರಿಂದ 130 ಪುಟಗಳ ಹಸ್ತಪ್ರತಿಯಲ್ಲಿ ಹಿಡಿಯುವಷ್ಟು ಕಥೆಗಳನ್ನು ಕಳಿಸಬಹುದು. ಹಸ್ತಪ್ರತಿಯಲ್ಲಿ ಹೆಸರು ನಮೂದಿಸಬಾರದು. ವಿವರಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು, ಇತ್ತೀಚಿನ ಭಾವಚಿತ್ರದೊಂದಿಗೆ ಕಳಿಸಬೇಕು.

ವಿಳಾಸ: ಸುಕುಮಾರ ಎನ್ ಶೆಟ್ಟಿ, ಎಸ್‌ಎನ್ ಶೆಟ್ಟಿ ಅಸೋಸಿಯೇಟ್ಸ್, ಕಚೇರಿ ನಂ.1 ಪುಷ್ಪಾಸ್ ಸಿಎಚ್‌ಎಸ್, ಸುಭಾಷ್ ರಸ್ತೆ, ಡೊಂಬಿವಿಲಿ (ಪಶ್ಚಿಮ) ಮುಂಬೈ– 421202, ಹೆಚ್ಚಿನ ವಿವರಗಳಿಗೆ ಮೊಬೈಲ್: ಸುಕುಮಾರ್–98202 96840 ಅಥವಾ 98928 33623 ಸಂಪರ್ಕಿಸಬಹುದು.


ಆಕರ್ಷಕ ಬಹುಮಾನಗಳನ್ನು ಗೆಲ್ಲಿರಿ

Himalaya®
HERBAL HEALTHCARE

ಆಕ್ಸಿಡೇಟಿವ್ ಹಾನಿಯಿಂದ ತ್ವಚೆಯನ್ನು ಯಾವ ನೈಸರ್ಗಿಕ ಪದಾರ್ಥವು ರಕ್ಷಿಸುತ್ತದೆ?




ಆರೋಗ್ಯ ಜಾಗ್ರತೆ :

ಮೇಕಪ್ ಹಾಕಿರುವಂತೆಯೇ ಎಂದಿಗೂ ಮಲಗಬೇಡಿರಿ, ಏಕೆಂದರೆ ಅದು ನಿಮ್ಮ ರಂಧ್ರಗಳನ್ನು ಮುಚ್ಚಿ ಕೂದಲಿನ ಮೂಲದ ರಂಧ್ರಗಳ ಒಳಗೆ ಮೃತ ತ್ವಚೆಯ ಕೋಶಗಳನ್ನು ಬಂಧಿಸಿಡುತ್ತದೆ.

ನಿಮಗಿದು ತಿಳಿದಿದೆಯೇ?

ಕ್ರ್ಯಾಬ್ ಆ್ಯಪಲ್ ತಣ್ಣಗಾಗಿಸಿ, ಮೃದುಗೊಳಿಸುತ್ತದೆ, ಸಾಮಾನ್ಯ ಗೋಧಿಯಲ್ಲಿ ನೈಸರ್ಗಿಕ ಆ್ಯಂಟಿಆಕ್ಸಿಡಂಟ್‌ಗಳಿರುತ್ತವೆ. ನಿಂಬೆಯು ಆಕ್ಸಿಡೇಟಿವ್ ಹಾನಿಯಿಂದ ತ್ವಚೆಯನ್ನು ಸಂರಕ್ಷಿಸುತ್ತದೆ. ಹಿಮಾಲಯ ರಿವಿಟಲೈಸಿಂಗ್ ನೈಟ್ ಕ್ರೀಮ್‌ನಲ್ಲಿ ಈ ಎಲ್ಲ ಪದಾರ್ಥಗಳೂ ತುಂಬಿವೆ.

ನಿಮ್ಮ ಉತ್ತರವನ್ನು ಈ ವಿಳಾಸಕ್ಕೆ ಕಳುಹಿಸಿ : ಸುಧಾ, ನಂ. 75, ಎಮ್.ಜಿ. ರಸ್ತೆ, ಬೆಂಗಳೂರು – 560001.